
ಕವಿತೆ





ರೇಣುಕಾ ರಮಾನಂದ
ಕಲೆ: ರೂಪಶ್ರೀ ಕಲ್ಲಿಗನೂರು

# ಅಕಾಲಿಕ

ಮಳೆ...
ನಾನು ಹಸಿರ ಹೊದ್ದು ನಗುವ
ಇಳೆಯ
ಕಣ್ತುಂಬಿಕೊಳ್ಳುತ್ತಿರುವೆ
ಒಜ್ಜೆ ಹೂವ ಲಜ್ಜೆಯ ತಾರೀಪು ಮಾಡುತ್ತ
ಸಜ್ಜೆಮನೆಯ
ಕಿಟಕಿಯಲ್ಲಿ ಕಾಲಮೇಲೆ
ಕಾಲು ಹಾಕಿ ಚಹ ಸೀಪುತ್ತಿರುವೆ

ಕವಿತೆಗೆ ಪದ ಪೋಣಿಸುತ್ತಿರುವ
ಸುದತಿಯೊಬ್ಬಳು ತಲೆಬಿಚ್ಚಿ ಕುಳಿತು
ಬಾ ಇನ್ನೊಮ್ಮೆ ಎನ್ನುತ್ತಿದ್ದಾಳೆ
ಒಳಗೆ ಬೆಚ್ಚಗಿದೆ
ಇನ್ನೆಂಟು ದಿನ ಇರು ಎಂದರೂ
ಉಳಿಯುತ್ತಾಳೆ
ಕಡಲಿಗೀಗ ಭರತಿಯ ಹೊತ್ತು
ಹಾಯಿದೋಣಿಗಳೆಲ್ಲ ಹರಿದು
ದಂಡೆಗೆ ಬಿದ್ದಿವೆ
ನೆನಪಿಸುವೆ ಮತ್ತೊಮ್ಮೆ
ಎಲ್ಲವೂ ಸರಿ ಇದ್ದರೆ ಚಳಿಯ ತಿಂಗಳು ಇದು
ಬಾನು ಹರಿದು ಸುರಿಯುತ್ತಿದೆ
ಮಳೆ
ಮುಗಿದಿಲ್ಲ ಇನ್ನೂ

ಊರೆಲ್ಲ ಅಳುವರು
ಉಬ್ಬುಧಮನಿಯ ಕಾಲುಗಳ
ರೈತರು ಮತ್ತೆ ಮೀಂಗುಲಿಗರು
ಸದ್ದಿಗೆ ಗೂಗೆ,ಬಾವಲಿಗಳು
ಚೀರಿ ಹಾರಿ ಮತ್ತಲ್ಲಿಯೇ ತೂಗುವವು
ಒಳಗೆ ತೂಕಡಿಸುತ್ತಿದೆ ತೆಪ್ಪಗೆ
ಅವಾಢವ್ಯ ಹಸಿವು

ಹೊಳೆ ಹಳ್ಳ ಉಕ್ಕಿ ಕಡಲಿಗೆ
ದುಂಬಾಲು ಬಿದ್ದ ಸದ್ದು
ಬಹಳ ದುರ್ದೈವದ್ದು
ತಣ್ಣೆ ಮಡಕೆ ಗಂಜಿಯಲ್ಲಿ ತಪ್ಪಿ
ತೇಲಿದ ಗೊದ್ದ
ಯಾರ ಹೊಟ್ಟೆ ಸೇರಿ
ತೆಂದು ಹೇಳಲಾಗದು

ಉಳಿದಂತೆ ಆಗಬೇಕಿದೆ
ಒಂದು ಸಾಲು ಮೌನಾಚರಣೆ
ಕೊಚ್ಚಿಹೋದ ಗದ್ದೆಗೆ
ಮೊಳಕೆಯೊಡೆದ ಪೈರಿಗೆ
ಬಿರುಕು ಬಿಟ್ಟ ಪಾದದಲ್ಲಿ
ತುಂಬಿಕೊಂಡ ಕೆಸರಿಗೆ
ಸರತಿ ಸಾಲಿನಲ್ಲಿ ಕುಳಿತು ನಂಬಿ
ಅಳುವ ದೋಣಿಗೆ

ಮಳೆ...
ನಾನು ಪಲುಕಿದ್ದೇ ಪಲುಕುವ ಹಳೆಯ
ಹಕ್ಕಿಯ ಹಾಡಿಗೆ ಬೇಸರಿಸಿಕೊಂಡು
ಬಯ್ಯುತ್ತಿದ್ದೇನೆ
ಹೂದಾನಿಯ ಹೂವು ಬಾಡುವ
ಕ್ರಿಯೆಗೆ ಪರಿತಪಿಸುತ್ತ
ಅರ್ಲು ಮಣ್ಣಿನ ವಾಸನೆಯ ಮೊತ್ತಕ್ಕೆ
ಬಿಳಿಚಿಕೊಳ್ಳುತ್ತಿದ್ದೇನೆ